ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.14/2020–21

ದಿನಾಂಕ: 07–12–2021

**ಪ್ರಕಟಣೆ – ನಾಲ್ಕು ವರ್ಷದ ಬಿ.ಎಸ್ಸಿ. (ಹಾನರ್ಸ್) ಕೋರ್ಸ್‌ಗಳ ಪ್ರವೇಶಾತಿ –2021**

ಸರ್ಕಾರವು ತನ್ನ ಪತ್ರ ಇಡಿ 206 ಟಿಇಸಿ 2021 ರಲ್ಲಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ನಾಲ್ಕು ವರ್ಷದ **ಬಿ.ಎಸ್ಸಿ. (ಹಾನರ್ಸ್) ಕೋರ್ಸ್‌ಗಳ** ಪ್ರವೇಶವನ್ನು ನೀಡಲು ಅನುಮತಿಸಲಾಗಿದೆ ಎಂದು ನಿರ್ದೇಶಿಸಿರುತ್ತದೆ. ಇಂಜಿನಿಯರಿಂಗ್ ಕಾಲೇಜುಗಳಲ್ಲಿ ನಾಲ್ಕು ವರ್ಷದ **ಬಿ.ಎಸ್ಸಿ. (ಹಾನರ್ಸ್) ಕೋರ್ಸ್‌ಗಳ** ಸೀಟ್ ಮ್ಯಾಟ್ರಿಕ್ಸ್ ಅನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ. **ಸದರಿ ಬಿ.ಎಸ್ಸಿ. (ಹಾನರ್ಸ್) ಸೀಟುಗಳನ್ನು ಎರಡನೇ ಸುತ್ತಿನ ಇಂಜಿನಿಯರಿಂಗ್ ಸೀಟು ಹಂಚಿಕೆಯ ಜೊತೆಯಲ್ಲಿ ಇಂಜಿನಿಯರಿಂಗ್ ರ್‍ಯಾಂಕ್ ಆಧಾರದ ಮೇಲೆ ಹಂಚಿಕೆ ಮಾಡಲಾಗುವುದು.** ಇಂಜಿನಿಯರಿಂಗ್ ರ್‍ಯಾಂಕ್ ಪಡೆದಿರುವ ಅರ್ಹ ಅಭ್ಯರ್ಥಿಗಳು **ಬಿ.ಎಸ್ಸಿ. (ಹಾನರ್ಸ್)** ಇಚ್ಛೆ / ಆಯ್ಕೆಗಳನ್ನು ದಿನಾಂಕ 07–12–2021 ರಿಂದ 09–12–2021 ರ ವರೆಗೆ ದಾಖಲಿಸಬಹುದಾಗಿದೆ. ಎರಡನೇ ಸುತ್ತಿನ ವಿವರವಾದ ಸೀಟು ಹಂಚಿಕೆಯ ವೇಳಾಪಟ್ಟಿಯನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ.

- ಯುಜಿಸಿಇಟಿ–2021 ರ ಎರಡನೇ ಸುತ್ತಿನ ಸೀಟು ಹಂಚಿಕೆಗೆ ನಾಲ್ಕು ವರ್ಷದ **ಬಿ.ಎಸ್ಸಿ. (ಹಾನರ್ಸ್) ಕೋರ್ಸ್‌ಗಳನ್ನು ಹಂಚಿಕೆಗೆ ಪರಿಗಣಿಸಲಾಗುವುದು.**
- ಅಭ್ಯರ್ಥಿಗಳು ನಾಲ್ಕು ವರ್ಷದ ಬಿ.ಎಸ್ಸಿ. **(ಹಾನರ್ಸ್) ಕೋರ್ಸ್‌ಗಳ ಪ್ರವೇಶಕ್ಕಾಗಿ ಮಾತ್ರ ಇಚ್ಛೆ / ಆಯ್ಕೆಗಳನ್ನು ಹೊಸದಾಗಿ ದಾಖಲಿಸಬಹುದಾಗಿದೆ.**
- ಈಗಾಗಲೇ ನಾಲ್ಕು ವರ್ಷದ ಬಿ.ಎಸ್ಸಿ. **(ಹಾನರ್ಸ್) ಕೋರ್ಸ್‌ಗಳ ಪ್ರವೇಶಕ್ಕಾಗಿ ಇಚ್ಛೆ / ಆಯ್ಕೆಗಳನ್ನು ದಾಖಲಿಸಿದ್ದಲ್ಲಿ ಮಾರ್ಪಡಿಸಬಹುದಾಗಿದೆ.**
- ಕುಲಸಚಿವರು, ವಿಟಿಯು, ಬೆಳಗಾಂ ಇವರ ದಿನಾಂಕ 24–11–2021 ರ ಪತ್ರದಂತೆ ವಿಶ್ವವಿದ್ಯಾಲಯದ ಶುಲ್ಕ ಮತ್ತು ಇತರೆ ಶುಲ್ಕವನ್ನು ಒಟ್ಟು ರೂ. 8,220/– (ಎಂಟು ಸಾವಿರದ ಇನ್ನೂರ ಇಪ್ಪತ್ತು ಮಾತ್ರ) ಅಭ್ಯರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಪಾವತಿಸಬೇಕು; ಹಾಗು

  ಪ್ರತಿ ವರ್ಷಕ್ಕೆ ಬೋಧನಾ ಶುಲ್ಕ ಮತ್ತು ಇತರೆ ಶುಲ್ಕ ಸೇರಿ ರೂ.51,780/– ಮೀರದಂತೆ (ಐವತ್ತೊಂದು ಸಾವಿರದ ಏಳನೂರ ಎಂಬತ್ತು ಮೀರದಂತೆ) ಪ್ರವೇಶ ಪಡೆಯುವ ಸಮಯದಲ್ಲಿ ಆಯಾ ಕಾಲೇಜಿನಲ್ಲಿ ಅಭ್ಯರ್ಥಿಗಳು ಪಾವತಿಸಬೇಕು.

ಕಾರ್ಯನಿರ್ವಾಹಕ ನಿರ್ದೇಶಕರು.

Registrar

Admn Sec
9/12.

**18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012**
18th Cross, Sampige Road, Malleshwaram, Bengaluru - 560 012.
Phone: 080 - 23 564 583, 23 460 460, 23 361 786, Fax: 080 - 23 461 576
e-mail : keauthority-ka@nic.in Website : http://kea.kar.nic.in